ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಶ್ರೀನಿವಾಸ್ ಹರೀಶ್ ಕುಮಾರ್

ಅಲುಕಾ ಸಂದ್ರಾ ಒರೆವಾ @ ಬೆನ್ನಿ -ವಿರುದ್ದ ಕರ್ನಾಟಕ ರಾಜ್ಯ ಸಿಇಎನ್ ಕ್ರೈಮ್ ಪೊಲೀಸ್ ಸ್ಟೇಷನ್, ರಾಮನಗರ ಜಿಲ್ಲೆ

ಕ್ರಿಮಿನಲ್ ಅರ್ಜಿಸಂಖ್ಯೆ: 6286/2020, ದಿನಾಂಕ 30 ನೇ ನವೆಂಬರ್, 2020

ಆಜ್ಞೆ

ನ್ಯಾಯಮೂರ್ತಿ ಶ್ರೀ ಶ್ರೀನಿವಾಸ್ ಹರೀಶ್ ಕುಮಾರ್:

ಇದು 'ದಂಡ ಪಕ್ರಿಯಾ ಸಂಹಿತೆಯ' ಯ 439 ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಲಾದ ಅರ್ಜಿಯಾಗಿದೆ.ಪ್ರಾರಂಭದಲ್ಲಿ ಮಾಹಿತಿ ತಂತ್ರಜ್ಞಾನ ಅಧಿನಿಯಮದ (ಸಂಕ್ಷಿಪ್ತವಾಗಿ ' ಐ.ಟಿ. ಅಧಿನಿಯಮ ' ಎಂದು ಕರೆಯಲಾಗಿದೆ) 66 ಸಿ ಮತ್ತು 66 ಡಿ ಪ್ರಕರಣಗಳ ಅಡಿಯಲ್ಲಿ ಹಾಗೂ ಭಾರತ ದಂಡ ಸಂಹಿತೆ'ಯ (ಸಂಕ್ಷಿಪ್ತವಾಗಿ ' ಐಪಿಸಿ ' ಎಂದು ಕರೆಯಲಾಗಿದೆ) 420 ನೇ ಪ್ರಕರಣದ ಅಡಿಯಲ್ಲಿನ ಅಪರಾಧಗಳಿಗಾಗಿ ಕ್ರಿ.ಸಂ .49/2020 ರಲ್ಲಿ ಎದುರುದಾರ-ಪೊಲೀಸರು ಎಫ್ಐಆರ್ ಅನ್ನು ದಾಖಲಿಸಿದ್ದಾರೆ.ಆರೋಪಪಟ್ಟಿಯಲ್ಲಿ, ಎದುರುದಾರರು ಮಾಹಿತಿ ತಂತ್ರಜ್ಞಾನ ಅಧಿನಿಯಮದ 66 ಸಿ ಮತ್ತು 66 ಡಿ ಪ್ರಕರಣಗಳ ಅಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳನ್ನು ಮಾತ್ರ ಉಲ್ಲೇಖಿಸಿದ್ದಾರೆ.

2. ಹಿನ್ನೆಲೆ:

ದಿನಾಂಕ:25.02.2020 ರಂದು ಪವಿತ್ರ ಡಿ., ಎಂಬ ಮಹಿಳೆಯು ಎದುರುದಾರ ಪೊಲೀಸರಿಗೆ ದೂರು ನೀಡಿದ್ದು, ಅದರಲ್ಲಿದಿನಾಂಕ: 24.2.2020 ರಂದು 21.58 ರಿಂದ 22.05 ಗಂಟೆಯ ನಡುವೆ ತನ್ನ ಮೊಬೈಲ್ ಫೋನ್ಗೆ ತನ್ನ ಬ್ಯಾಂಕ್ ಖಾತೆಯಿಂದ ಒಂಬತ್ತು ಬಾರಿ ರೂ .10,000/-ಗಳನ್ನು ತೆಗೆದಿರುವ ಬಗ್ಗೆ 0 ಮೆಸೇಜುಗಳು ಬಂದಿವೆ ಎಂದು ತಿಳಿಸಿದ್ದಾರೆ.ಆಕೆಯ ಬ್ಯಾಂಕ್ ಖಾತೆಯಿಂದ ಒಟ್ಟು ರೂ .90,000/-ಮೊತ್ತವನ್ನು ತೆಗೆದಿರುವುದು ಗೊತ್ತಾಗಿ, ಆಕೆದಿನಾಂಕ: 25.2.2020 ರಂದು ಬ್ಯಾಂಕಿಗೆ ಹೋಗಿ ಆ ಬಗ್ಗೆ ವಿಚಾರಿಸಿದರು.ಆಕೆಯ ಬ್ಯಾಂಕ್ ಖಾತೆಯಿಂದ ರೂ .90,000/-ಮೊತ್ತವನ್ನು ಯಾರೋ ಎಟಿಎಂ ಕೌಂಟರ್ನಲ್ಲಿ ತೆಗೆದಿರುವುದು ಆಕೆಗೆ ತಿಳಿದುಬಂತು.

3. ಭಾರತ ದಂಡ ಸಂಹಿತೆಯ 420 ನೇ ಪ್ರಕರಣದ ಅಡಿಯಲ್ಲಿ ಈ ಅಪರಾಧವು ಜಾಮೀನು ರಹಿತವಾಗಿದೆಯೆಂಬ ಮತ್ತು ಅರ್ಜಿದಾರರು ಇದೇ ರೀತಿಯ 60 ಅಪರಾಧಗಳಲ್ಲಿ ಭಾಗಿಯಾಗಿದ್ದಾರೆಂದು ಕಂಡುಬಂದ ಕಾರಣದ ಮೇಲೆ ಸೆಷನ್ಸ್ ನ್ಯಾಯಾಲಯವು ಅರ್ಜಿದಾರರ ಜಾಮೀನು ಅರ್ಜಿಯನ್ನು ತಿರಸ್ಕರಿಸಿತು.

4. ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲರಾದ ಶ್ರೀ ಹಸ್ಮತ್ ಪಾಷಾ ಅವರ ವಾದದ ಮುಖ್ಯ ಅಂಶವೆಂದರೆ, ಮಾಹಿತಿ ತಂತ್ರಜ್ಞಾನ ಅಧಿನಿಯಮದ ಅಡಿಯಲ್ಲಿ ಅಪರಾಧಗಳು ಜಾಮೀನು ನೀಡಬಹುದಾದವು.ಈ ಕಾರಣಕ್ಕಾಗಿ ಅರ್ಜಿದಾರರು ಹಕ್ಕಿನ ವಿಷಯವಾಗಿ ಜಾಮೀನಿನ ಮೇಲೆ ಬಿಡುಗಡೆಯಾಗಲು ಅರ್ಹರಾಗಿದ್ದಾರೆ ಮತ್ತು ಎಫ್ಐಆರ್ನ ಒಳಾಂಶಗಳು ಭಾರತ ದಂಡ ಸಂಹಿತೆ 420 ನೇ ಪ್ರಕರಣದ ಅಡಿಯಲ್ಲಿ ಅಪರಾಧವಾಗುವುದಿಲ್ಲ.ಅದಲ್ಲದೆ, ಈ ಅಂಶಗಳನ್ನು ಪರಿಶೀಲಿಸುತ್ತಾ, ಅರ್ಜಿದಾರರ ವಿರುದ್ಧದ ಆರೋಪಗಳೆಂದರೆ, ಎಟಿಎಂಗೆ ' ಸ್ಕಿಮ್ಮರ್ ' ಎಂಬ ಸಾಧನವನ್ನು ಅಳವಡಿಸುವ ಮೂಲಕ ಮೊದಲ ಮಾಹಿತಿದಾರರ ಎಟಿಎಂ ಕಾರ್ಡಿನ ದತ್ತಾಂಶವನ್ನು ಆಕೆ ಸಂಗ್ರಹಿಸಿ, ನಕಲಿ ಎಟಿಎಂ ಕಾರ್ಡ್ ತಯಾರಿಸಿ, ಮೊದಲ ಮಾಹಿತಿದಾರರ ಬ್ಯಾಂಕ್ ಖಾತೆಯಿಂದ ಹಣವನ್ನು ಪಡೆದಿದ್ದಾಳೆ ಎಂದು ನಿವೇದಿಸಿದ್ದಾರೆ.ಈ ಆರೋಪಗಳು ವ ಂ ಚನೆಯ ಅಪರಾಧವನ್ನು ಒಳಗೊಂಡಿರುವುದಿಲ್ಲ.ಏಕೆಂದರೆ, ಅರ್ಜಿದಾರರಿಂದ ಮೊದಲ ಮಾಹಿತಿದಾರರಿಗೆ ಯಾವುದೇ ಅಪ್ರಾಮಾಣಿಕ ಪ್ರಚೋದನೆ ಇರಲಿಲ್ಲ.ಆದ್ದರಿಂದ, ಇವು ಐಟಿ ಅಧಿನಿಯಮದ

66 ಸಿ ಮತ್ತು 66 ಡಿ ಪ್ರಕರಣಗಳನ್ನು ಮಾತ್ರ ಅನ್ವಯಿಸಬಹುದಾದ ಅಪರಾಧಗಳಾಗಿದ್ದು, ಅವುಗಳಿಗೆ ಜಾಮೀನು ನೀಡಬಹುದಾಗಿದೆ.ಅರ್ಜಿದಾರರು ವಿದೇಶೀಯರಾಗಿದ್ದು, ವಿದ್ಯಾರ್ಥಿವೀಸಾದಲ್ಲಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ; ಪೊಲೀಸರು ಆಕೆಯ ವೀಸಾ ಮತ್ತು ಪಾಸ್ಪೋರ್ಟ್ ಅನ್ನು ವಶಪಡಿಸಿಕೊಂಡಿದ್ದಾರೆ ಮತ್ತು ಈ ಕಾರಣಕ್ಕಾಗಿ ಆಕೆ ತನ್ನ ತಾಯ್ನಾಡಿಗೆ ಹಾರಿ ಹೋಗುವ ಯಾವುದೇ ಭಯವಿರುವುದಿಲ್ಲ ಎಂದು ನಿವೇದಿಸಿದರು.ತನಿಖೆಯನ್ನು ಪೂರ್ಣಗೊಳಿಸಲು ಪೋಲಿಸರೊಂದಿಗೆ ಸಹಕರಿಸಲು ಆಕೆ ಸಿದ್ಧಳಿದ್ದಾರೆ; ಆದ್ದರಿಂದ, ಕಠಿಣ ಷರತ್ತುಗಳನ್ನು ವಿಧಿಸಿ, ಜಾಮೀನು ನೀಡಬಹುದು ಎಂದು ನಿವೇದಿಸಿಕೊಂಡಿದ್ದಾರೆ.

5. ಅರ್ಜಿದಾರರು ಇದೇ ರೀತಿಯ ಸುಮಾರು 60 ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ ಎಂದು ಸರ್ಕಾರಿ ವಕೀಲರು ನಿವೇದಿಸಿದರು.ಇಂತಹುದೇ ಅಪರಾಧಕ್ಕಾಗಿ ಆಕೆ ಮತ್ತು ಇತರ ಆರೋಪಿಗಳ ವಿರುದ್ಧ ಬೇರೆ ಬೇರೆ ಪೊಲೀಸ್ ಠಾಣೆಗಳಲ್ಲಿ ಎಫ್ಐಆರ್‌ಗಳು ದಾಖಲಾಗಿವೆ.ಆಕೆ ಹವ್ಯಾಸಿ ಅಪರಾಧಿಯಾಗಿದ್ದು, ಅವಳಿಗೆ ಜಾಮೀನು ನೀಡಿದರೆ, ಆಕೆ ಮತ್ತೆ ಮತ್ತೆ ಅದೇ ಅಪರಾಧ ಮಾಡುವ ಅಭ್ಯಾಸ ಹೊಂದಿದ್ದಾಳೆ.ಆದ್ದರಿಂದ ಜಾಮೀನು ನೀಡಲು ಯಾವುದೇ ಆಧಾರಗಳಿಲ್ಲ.ಅಲ್ಲದೆ ಭಾರತ ದಂಡ ಸಂಹಿತೆ 420 ರ ಅಥವಾ 468 ನೇ ಪ್ರಕರಣದ ಅಡಿಯಲ್ಲಿ ಅಪರಾಧಗಳನ್ನು ಪ್ರಸ್ತುತ ಸನ್ನಿವೇಶಗಳಿಗೆ ಅನ್ವಯಿಸಬಹುದು ಎಂದು ಸೂಚಿಸುವ ಸಾಕ್ಷ್ಯಾಧಾರಗಳಿವೆ ಎಂದು ಅವರು ನಿವೇದಿಸಿದ್ದಾರೆ.ಈ ನಿಟ್ಟಿನಲ್ಲಿ ಟೆಲ್ಲರ್ ಯಂತ್ರಕ್ಕೆ ಸಾಧನವನ್ನು ಅಳವಡಿಸಿ ಮೋಸಗೊಳಿಸುವ ಮೂಲಕ ಎಟಿಎಂ ಕಾರ್ಡ್ಗಳಿಂದ ದತ್ತಾಂಶವನ್ನು ಸಂಗ್ರಹಿಸುವುದು ವಂಚನೆಯಲ್ಲದೆ ಬೇರೇನಲ್ಲ.ಈ ರೀತಿಯ ಅಪರಾಧಗಳು ಬ್ಯಾಂಕಿಂಗ್ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತವೆ ಎಂದೂ ಸಹ ಅವರು ನಿವೇದಿಸುತ್ತಾ, ಅರ್ಜಿಯನ್ನು ವಜಾಗೊಳಿಸಲು ಕೋರಿರುತ್ತಾರೆ.

6. ಖೋಟಾ ಎಟಿಎಂ ಕಾರ್ಡ್ ಬಳಸಿ ಮೊದಲ ಮಾಹಿತಿದಾರರ ಬ್ಯಾಂಕ್ ಖಾತೆಯಿಂದ ರೂ .90,000/- ಮೊತ್ತವನ್ನು ಪಡೆದಿದ್ದಾರೆ ಎಂದು ಅರ್ಜಿದಾರರ ವಿರುದ್ಧ ಆರೋಪಿಸಲಾಗಿದೆ.ಅಪರಾಧವನ್ನು ಮಾಡಲು ಅವಳು ' ಸ್ಕಿಮ್ಮರ್ ' ಎಂಬ ಸಾಧನವನ್ನು ಮತ್ತು ಕ್ಯಾಮೆರಾವನ್ನು ಬಳಸಿದ್ದಾಳೆ.ಪೊಲೀಸರು ಅರ್ಜಿದಾರರಿಂದ ಕ್ಯಾಮೆರಾ, ಸ್ಕಿಮ್ಮರ್ ಮತ್ತು ಇತರ ಸಾಮಗ್ರಿಗಳನ್ನು ವಶಪಡಿಸಿಕೊಂಡಿದ್ದಾರೆ.

7. ಖಾತೆದಾರನು ತನ್ನ ಕಾರ್ಡ್ ಬಳಸಿ ಟೆಲ್ಲರ್ ಯಂತ್ರವನ್ನು ನಿರ್ವಹಿಸಿದಾಗ, ಎಟಿಎಂ ಕಾರ್ಡ್ನಲ್ಲಿರುವ ದತ್ತಾಂಶವನ್ನು ಸಂಗ್ರಹಿಸಲು ಸ್ಕಿಮ್ಮರ್ ಅನ್ನು ಮತ್ತು ಪಾಸ್ವರ್ಡ್ನ್ನು ಪಡೆಯಲು ಕ್ಯಾಮೆರಾವನ್ನು ಬಳಸಲಾಗಿದೆ.ನಂತರ ಸಂಗ್ರಹಿಸಲಾದ ದತ್ತಾಂಶವನ್ನು ಬ್ಯಾಂಕಿನ ಗ್ರಾಹಕರ ಖಾತೆಯಿಂದ ಅವರಿಗೆ ಗೊತ್ತಿಲ್ಲದಂತೆ ಹಣ ತೆಗೆಯಲು ಕಾರ್ಡ್ಗಳನ್ನು ನಕಲು ಮಾಡುವುದಕ್ಕಾಗಿ ಬಳಸಲಾಗಿದೆ.ಈ ರೀತಿಯಲ್ಲಿ ಎಸಗಿದ ಅಪರಾಧವು ಭಾರತ ದಂಡ ಸಂಹಿತೆಯ 468 ರ ಅಂಶಗಳಿಗೆ ಸರಿಹೊಂದುತ್ತದೆ.ಏಕೆಂದರೆ, ನಿಜವಾದ ಕಾರ್ಡ್ ಹೊಂದಿರುವವರು ತಮ್ಮ ವಹಿವಾಟು ಸಂಪೂರ್ಣವಾಗಿ ಸುರಕ್ಷಿತವಾಗಿದೆ ಎಂಬ ನಂಬಿಕೆಯ ಅಡಿಯಲ್ಲಿ ಯಂತ್ರವನ್ನು ನಿರ್ವಹಿಸುತ್ತಾರೆ; ಆದರೆ, ಅವರಿಗೆ ಗೊತ್ತಿಲ್ಲದೆ, ಕಾರ್ಡ್ನಲ್ಲಿನ ದತ್ತಾಂಶವನ್ನು ಸ್ಕಿಮ್ಮರ್ನಿಂದ ಸೆರೆಹಿಡಿಯಲಾಗಿದೆ; ಈ ಕಾರ್ಯರೀತಿಯು ಅಪ್ರಾಮಾಣಿಕವಾಗಿ ಎಟಿಎಂ ಕಾರ್ಡ್ ಹೊಂದಿರುವವರನ್ನು ಹಾಳಾಗಿರುವ ಟೆಲ್ಲರ್ ಯಂತ್ರವನ್ನು ನಿರ್ವಹಿಸಲು ಪ್ರೇರೇಪಿಸುತ್ತದೆಯಲ್ಲದೆ ಬೇರೇನಲ್ಲ.ಈ ರೀತಿಯ ಅಪರಾಧದಲ್ಲಿ, ಭಾರತ ದಂಡ ಸಂಹಿತೆಯ 468 ನೇ ಪಕರಣದ ಅಡಿಯಲ್ಲಿ ಅಪರಾಧಕ್ಕಾಗಿ ಎಲ್ಲಾ ಅಗತ್ಯ ಅಂಶಗಳು ಪ್ರಸ್ತುತವಾಗಿದ್ದರೂ, ಮಾಹಿತಿ ತಂತ್ರಜ್ಞಾನ ಅಧಿನಿಯಮ ಜಾರಿಗೆ ಬಂದ ನಂತರ, ಭಾರತ ದಂಡ ಸಂಹಿತೆಯ 420 ಮತ್ತು 468 ನೇ ಪ್ರಕರಣದ ಅಡಿಯಲ್ಲಿ ಅಪರಾಧಗಳ ಅಗತ್ಯ ಅಂಶಗಳು 664 ಮತ್ತು 66 ಡಿ ಪ್ರಕರಣದ ಅಡಿಯಲ್ಲಿ ಅಂತರ್ಗತವಾಗಿರುತ್ತವೆ.ಅವುಗಳು ಜಾಮೀನು ನೀಡಬಹುದಾದವುಗಳಾಗಿವೆ ಮತ್ತು ಅರ್ಜಿದಾರರು ಜಾಮೀನು ಪಡೆಯಲು ಅರ್ಹರಾಗಿದ್ದಾರೆ ಎಂದು ಶ್ರೀ ಹಸ್ಮತ್ ಪಾಷಾ ಅವರು ಬಲವಾಗಿ ವಾದಿಸಲು ಇದು ಕಾರಣವಾಗಿದೆ.ಅದೇನೇ ಇರಲಿ, ಇಲ್ಲಿ ವ್ಯವಹರಿಸಬಹುದಾದ ಇನ್ನೊಂದು ಪ್ರಮುಖ ಅಂಶವಿದೆ.

8. ಪ್ರಾಸಿಕ್ಯೂಷನ್ ಪ್ರಕಾರ, ಅರ್ಜಿದಾರರು ಈ ರೀತಿಯ 60 ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ.ಕೇಸ್ ಡೈರಿಯಲ್ಲಿ, 44 ಪ್ರಕರಣಗಳ ಪಟ್ಟಿಯಿದೆ.ಆದರೆ, ಶ್ರೀ ಹಸ್ಮತ್ ಪಾಷಾ ಅವರ ಪ್ರಕಾರ, ಅರ್ಜಿದಾರರನ್ನು ಕೇವಲ ನಾಲ್ಕು ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾತ್ರ ಬಂಧಿಸಲಾಗಿದೆ ಮತ್ತು ಅವರಿಗೆ ಎರಡು ಪ್ರಕರಣಗಳಲ್ಲಿ ಜಾಮೀನು ನೀಡಲಾಗಿದೆ.ಅಪರಿಚಿತ ಆರೋಪಿಗಳ ವಿರುದ್ಧ 60 ಎಫ್ಐಆರ್ ಕೇಸುಗಳನ್ನು ದಾಖಲಿಸಲಾಗಿದೆ ಮತ್ತು ಅರ್ಜಿದಾರರ ಬಂಧನದ ನಂತರ, ಆಕೆಯು ಆ ಎಲ್ಲಾ ಪ್ರಕರಣಗಳಲ್ಲಿ ಭಾಗಿಯಾಗಿರುವುದಾಗಿ

ತನ್ನೊಪ್ಪಿಕೊಂಡಿದ್ದಾಳೆ.ಆದರೆ, ಆಕೆಯ ಬಂಧನವು 4 ಅಥವಾ 5 ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾತ್ರ ಎಂದು ಮಾನ್ಯ ಸರ್ಕಾರಿ ವಕೀಲರು ಹೇಳಿದ್ದಾರೆ.ಆಕೆಯ ವಿರುದ್ಧ ಕನಿಷ್ಟ ನಾಲ್ಕು ಪ್ರಕರಣಗಳಿವೆ ಮತ್ತು ಆಕೆಗೆ ಎರಡು ಪ್ರಕರಣಗಳಲ್ಲಿ ಜಾಮೀನನ್ನು ನೀಡಲಾಗಿದೆ.ಎಂದರೆ, ಅವಳಿಗೆ ಎರಡು ಪ್ರಕರಣಗಳಲ್ಲಿ ಜಾಮೀನು ನೀಡಲಾಗಿದೆ ಎಂದರ್ಥ.ದಂಡ ಪ್ರಕ್ರಿಯಾ ಸಂಹಿತೆಯ 436 ಅಥವಾ 437 ನೇ ಪ್ರಕರಣಗಳ ಅಡಿಯಲ್ಲಿ ಆಕೆಗೆ ಜಾಮೀನು ನೀಡಿರಬಹುದು.ಆದರೆ, ಶ್ರೀ ಹಸ್ಮತ್ ಪಾಷಾ ಅವರ ವಾದಗಳ ಪ್ರಕಾರ, ಪ್ರಸ್ತುತ ಈ ರೀತಿಯ ಪ್ರಕರಣವು ದಂಡ ಪ್ರಕ್ರಿಯಾ ಸಂಹಿತೆಯ 436 ನೇ ಪ್ರಕರಣದ ಅಡಿಯಲ್ಲಿ ಸಂಪೂರ್ಣವಾಗಿ ಜಾಮೀನು ಪಡೆಯುವಂತದ್ದಾಗಿದೆ.ಭಾರತ ದಂಡ ಸಂಹಿತೆಯ 420 ನೇ ಪ್ರಕರಣದ ಅಡಿಯಲ್ಲಿ ಮಾತ್ರ ಇದು ಅನ್ವಯಿಸುವುದಿಲ್ಲ.ದಂಡ ಪ್ರಕ್ರಿಯಾ ಸಂಹಿತೆಯ 436 ನೇ ಪ್ರಕರಣದ ಅಡಿಯಲ್ಲಿ ಅನ್ವಯಿಸುತ್ತದೆ ಎಂದು ಭಾವಿಸಿ, ಒಬ್ಬ ವ್ಯಕ್ತಿಯು ಪದೇ ಪದೇ ಜಾಮೀನು ನೀಡಬಹುದಾದ ಅಪರಾಧಗಳನ್ನು ಮಾಡಿದರೆ, ಅವನು ಅಥವಾ ಅವಳು ಪ್ರತಿಬಾರಿಯೂ ಜಾಮೀನಿಗೆ ಅರ್ಹರಾಗುತ್ತಾರೆಯೇ?ಎಂಬುದು ಕೇಳಬೇಕಾದ ಪ್ರಶ್ನೆಯಾಗಿದೆ.ಜಾಮೀನಿನ ಮೇಲೆ ಬಿಡುಗಡೆಯಾದ ವ್ಯಕ್ತಿಯು ಹಾಜರಾಗುವ ಸಮಯ ಮತ್ತು ಸ್ಥಳಕ್ಕೆ ಸಂಬಂಧಿಸಿದಂತೆ ಜಾಮೀನಿನ ಷರತ್ತುಗಳನ್ನು ಉಲ್ಲಂಘಿಸಿದರೆ, ದಂಡ ಪ್ರಕ್ರಿಯಾ ಸಂಹಿತೆಯ 436 ( 1) ನೇ ಪ್ರಕರಣದ ಅಡಿಯಲ್ಲಿ ನೀಡಲಾದ ಜಾಮೀನನ್ನು ರದ್ದುಗೊಳಿಸಬಹುದು ಎಂದು ದಂಡ ಪ್ರಕ್ರಿಯಾ ಸಂಹಿತೆಯ 436 ( 2) ನೇ ಪ್ರಕರಣದ ಅಡಿಯಲ್ಲಿ ಯೋಜಿಸುತ್ತದೆ.

9. ಹೆಚ್ಚಿನ ವಿಶ್ಲೇಷಣೆಗಾಗಿ, ಸರ್ವೋಚ್ಚ ನ್ಯಾಯಾಲಯದ ಎರಡು ನಿರ್ಣಯಗಳನ್ನು ಉಲ್ಲೇಖಿಸಬಹುದು.ಅವುಗಳೆಂದರೆ, ತಲಾಬ್ ಹಾಜಿ ಹುಸೇನ್ –ವಿರುದ್ಧ-ಮಧುಕರ್ ಪುರುಷೋತ್ತಮ್ ಮೋಂಡ್ಕರ್ ಮತ್ತು ಇನ್ನೊಬ್ಬರು ಮತ್ತು ರತಿಲಾಲ್ ಭಂಜಿ ಮಿಥಾನಿ -ವಿರುದ್ಧ-ಅಸಿಸ್ಟೆಂಟ್ ಕಲೆಕ್ಟರ್ ಆಫ್ ಕಸ್ಟಮ್ಸ್ ನ ಜಾಮೀನು ಮಂಜೂರು ಮಾಡಿದ ನಂತರ, ಆರೋಪಿಯ ನಡವಳಿಕೆಯು ನ್ಯಾಯಯುತ ವಿಚಾರಣೆಗೆ ಅಡ್ಡಿಪಡಿಸಿದರೆ, ಜಾಮೀನು ನೀಡಬಹುದಾದ ಪ್ರಕರಣದಲ್ಲಿ ಆರೋಪಿಗೆ ನೀಡಲಾದ ಜಾಮೀನನ್ನು ರದ್ದುಗೊಳಿಸುವ ಅಂತರ್ಗತ ಅಧಿಕಾರವನ್ನು ಉಚ್ಚ ನ್ಯಾಯಾಲಯವು ಹೊಂದಿದೆ ಎಂದು ಈ ನಿರ್ಣಯಗಳಿಂದ ತಿಳಿದುಬರುತ್ತದೆ.ಚ ತಲಾಬ್ ಹಾಜಿ ಹುಸೇನ್ (ಮೇಲಿನಂತೆ) ಮೊಕದ್ದಮೆಯಲ್ಲಿನ ಅನುಪಾತವನ್ನು ರತಿಲಾಲ್ ಭಂಜಿ ಮಿಥಾನಿ (ಮೇಅನಂತೆ) ಮೊಕದ್ದಮೆಯಲ್ಲಿ ದೃಢೀಕರಿಸಲಾಗಿದೆ.ಈ ನಿರ್ಧಾರಗಳನ್ನು ಉಲ್ಲೇಖಿಸಲು ಕಾರಣವೇನೆಂದರೆ, ಅವು ನೇರವಾಗಿ ಪ್ರಕರಣಕ್ಕೆ ಅನ್ವಯಿಸುತ್ತವೆ ಎಂಬುದಲ್ಲ.ಆದರೆ, ಹೆಚ್ಚು ನಾಮಮಾತ್ರದ ಚರ್ಚೆಯಲ್ಲಿರುವ ಸೂಕ್ಷ್ಮ ಎರ ವಿಷಯದ ಬಗ್ಗೆ ಆಲೋಚಿಸಲು ಆಧಾರವನ್ನು ಒದಗಿಸುತ್ತವೆ.ಜಾಮೀನು ಎಷ್ಟೇ ಸಂಖ್ಯೆಯ ಅಪರಾಧಗಳನ್ನು ಮಾಡಲು ನೀಡಿದ ಪರವಾನಗಿ ಅಲ್ಲ. ಜಾಮೀನು ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ್ದರೂ, ಸ್ವಾತಂತ್ರ್ಯದ ದುರುಪಯೋಗವು ಸಮರ್ಥನೀಯವಲ್ಲ ಮತ್ತು ವ್ಯಕ್ತಿಯ ವಿರುದ್ಧ ಗುರಿ ಮಾಡದಿರುವ, ಆದರೆ, ಸಮಾಜದ ವಿರುದ್ಧ ಎಸಗಲಾದ ಅಪರಾಧಗಳನ್ನು ಭಿನ್ನವಾಗಿ ನೋಡಬೇಕು.ಉಚ್ಚ ನ್ಯಾಯಾಲಯವು ತನ್ನ ಅಂತರ್ಗತ ಅಧಿಕಾರದ ಅಡಿಯಲ್ಲಿ ಜಾಮೀನನ್ನು ಚ ರದ್ದುಗೊಳಿಸುವುದರಿಂದ, ವ್ಯಕ್ತಿಯ ವೈಯಕ್ತಿಕ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದಿಲ್ಲ ಎಂದು ರತಿಲಾಲ್ ಭಂಜಿ (ಮೇಲೆ ಹೇಳಲಾದ) ಮೊಕದ್ದಮೆಯಲ್ಲಿ ಸರ್ವೋಚ್ಚ ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ; ಹಾಗೆಯೇ ಜಾಮೀನು ನೀಡಬಹುದಾದ ಅಪರಾಧಗಳನ್ನು ಆಗಾಗ್ಗೆ ಮಾಡುವ ಆರೋಪಿಗೆ ಜಾಮೀನನ್ನು ನಿರಾಕರಿಸಿದರೆ, ಅದು ಭಾರತದ ಸಂವಿಧಾನದ 21 ನೇ ಅನುಚ್ಛೇದವನ್ನು ಉಲ್ಲಂಘಿಸಿದಂತಾಗುವುದಿಲ್ಲ.

10. ಈ ವಿಶ್ಲೇಷಣೆಗೆ ಸಂಯೋಜಿತವಾಗಿ, ಜಾಮೀನು ನೀಡಬಹುದಾದ ಅಪರಾಧಕ್ಕೆ ಸಂಬಂಧಿಸಿದಂತೆ ಜಾಮೀನಿನ ಮೇಲೆ ಇರುವ ವ್ಯಕ್ತಿಯು, ಮತ್ತೊಮ್ಮೆ ಜಾಮೀನು ನೀಡಬಹುದಾದ ಅಪರಾಧವನ್ನು ಮಾಡಿದ ನಂತರ ಜಾಮೀನಿಗೆ ಅರ್ಜಿ ಸಲ್ಲಿಸಲು ಸಾಧ್ಯವಿಲ್ಲ ಎಂದು ಹೇಳಬಹುದು.ದೂರಗಾಮಿ ಪರಿಣಾಮಗಳ ಕಲ್ಪನೆಯಿಲ್ಲದೆ, ಈ ರೀತಿಯಲ್ಲಿ ಹಕ್ಕನ್ನು ಉದಾರವಾಗಿ ಅರ್ಥೈಸುವ ಯಾವುದೇ ಪ್ರಯತ್ನವು ಸಮಾಜ ಅಥವಾ ವ್ಯವಸ್ಥೆಯ ಮೇಲೆ ಹಾನಿಕಾರಕ ಪರಿಣಾಮವನ್ನು ಬೀರುತ್ತದೆ.ಉದಾಹರಣೆಗೆ, ಪ್ರಸ್ತುತ ಪ್ರಕರಣವು ಬ್ಯಾಂಕಿಂಗ್ ವ್ಯವಸ್ಥೆಯ ಮೇಲೆ ಹೇಗೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂಬುದನ್ನು ಗಮನಿಸಬಹುದು.ಆದುದರಿಂದ, ಆರೋಪಿಯು ಪದೇ ಪದೇ ಜಾಮೀನು ನೀಡಬಹುದಾದ ಅಪರಾಧವನ್ನು/ಗಳನ್ನು ಮಾಡಿದಾಗ, ದಂಡ ಪ್ರಕ್ರಿಯಾ ಸಂಹಿತೆಯ 436 ನೇ ಪ್ರಕರಣದ ಅಡಿಯಲ್ಲಿ ಜಾಮೀನು ಪಡೆಯುವ ಹಕ್ಕು ಪರಿಮಿತಿಗೊಳಪಡುತ್ತದೆ.

11. ಮೇಲ್ಕಂಡ ದೃಷ್ಟಿಕೋನದಲ್ಲಿ, ಅರ್ಜಿದಾರರ ಪ್ರಕರಣವನ್ನು ಪರಿಶೀಲಿಸಿದರೆ, ಆಕೆ ಜಾಮೀನನ್ನು ಹಕ್ಕಿನ ವಿಷಯವಾಗಿ ಕ್ಲೇಮು ಮಾಡಲು ಸಾಧ್ಯವಿಲ್ಲ.ಅಪರಾಧದಲ್ಲಿ ಅ ಆಕೆ ಭಾಗಿಯಾಗಿರುವುದನ್ನು ಸೂಚಿಸುವ ಸಾಕ್ಷ್ಯಾಧಾರಗಳಿವೆ.ಆದರೂ, ಆಕೆ ಒಬ್ಬ ಮಹಿಳೆ, ಆಕೆಯಿಂದ ಉಪಕರಣಗಳು ಮತ್ತು ಸಾಧನಗಳನ್ನು ವಶಪಡಿಸಿಕೊಳ್ಳಲಾಗಿದೆ ಮತ್ತು ಆಕೆಯ ಪಾಸ್ಪೋರ್ಟ್ ಹಾಗೂ ವೀಸಾವನ್ನು ಸಹ ವಶಪಡಿಸಿಕೊಳ್ಳಲಾಗಿದೆ ಎಂಬ ಅಂಶಗಳನ್ನು ಪರಿಗಣಿಸಿ, ಆಕೆಗೆ ಜಾಮೀನು ನೀಡಲು ಒಪ್ಪಬಹುದು.ಆಕೆ ವಿಚಾರಣೆಗೆ ಲಭ್ಯವಾಗುವುದಿಲ್ಲ ಎಂದು ಹೇಳಲಾಗುವುದಿಲ್ಲ.ಆಕೆ ಈ ಷರತ್ತುಗಳನ್ನು ಉಲ್ಲಂಘಿಸಿದರೆ, ಯಾವುದೇ ಸಮಯದಲ್ಲಿ ಜಾಮೀನಿನ ರೂಪದ ವಿನಾಯಿತಿಯನ್ನು ರದ್ದುಗೊಳಿಸಬಹುದು ಎಂದು ಆಕೆಗೆ ಅರಿವು ಮೂಡಿಸಲು ಕಠಿಣ ಷರತ್ತುಗಳನ್ನು ವಿಧಿಸಬಹುದು.ಆದ್ದರಿಂದ ಈ ಕೆಳಗಿನ ಆದೇಶ:

ಆದೇಶ

(ಎ) ಅರ್ಜಿಯನ್ನು ಪುರಸ್ಕರಿಸಲಾಗಿದೆ.

(ಬಿ) ಅಧಿವಿಚಾರಣಾ ನ್ಯಾಯಾಲಯಕ್ಕೆ ಮನವರಿಕೆಯಾಗುವಂತೆ ಅರ್ಜಿದಾರಳಿಂದ ರೂ .1,00,000/-ಗಳ ಬಾಂಡ್ ಮತ್ತು ಎರಡು ಜಾಮೀನುಗಳನ್ನು ಪಡೆದ ಮೇಲೆ ಆಕೆಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದು.ಆಕೆಯನ್ನು ಈ ಕೆಳಗಿನ ಷರತ್ತುಗಳಿಗೆ ಸಹ ಒಳಪಡಿಸಲಾಗಿದೆ:

(i) ಅಧಿ ವಿಚಾರಣೆಯ ಮುಕ್ತಾಯದವರೆಗೆ ಅವಳು ನಿಯಮಿತವಾಗಿ ಅಧಿವಿಚಾರಣಾ ನ್ಯಾಯಾಲಯದ ಮುಂದೆ ಹಾಜರಾಗಬೇಕು.

(ii) ಅವಳು ಸಾಕ್ಷ್ಯಗಳನ್ನು ಹಾಳು ಮಾಡಬಾರದು ಮತ್ತು ಸಾಕ್ಷಿಗಳಿಗೆ ಬೆದರಿಕೆ ಹಾಕಬಾರದು.

(1) ಅವಳು ವಿಚಾರಣೆ ಮುಗಿಯುವವರೆಗೆ ಪ್ರತಿ ಭಾನುವಾರದಂದು ಬೆಳಿಗ್ಗೆ 9 ಗ ೦ ಟೆಯಿ ೦ ದ ೧ ಮಧ್ಯಾಹ್ನ 12 ಗಂಟೆಯವರೆಗೆ ಯಲಹಂಕ ಪೊಲೀಸ್ ಠಾಣೆಯಲ್ಲಿ ತನ್ನ ಹಾಜರಾತಿಯನ್ನು ಹಾಕಬೇಕು.

(iv) ಅವಳು ತನ್ನ ವಿಳಾಸದ ಪುರಾವೆ ಮತ್ತು ಮೊಬೈಲ್ ದೂರವಾಣಿ ಸ ೦ ಖ್ಯೆಗಳನ್ನು ಅಧಿ ವಿಚಾರಣಾ ನ್ಯಾಯಾಲಯಕ್ಕೆ ಒದಗಿಸತಕ್ಕದ್ದು.ಒಂದುವೇಳೆ ಆಕೆ ತನ್ನ ಮನೆಯನ್ನು ಬದಲಾಯಿಸಿದದರೆ, ಹೊಸ ವಿಳಾಸವನ್ನು ವಿಚಾರಣಾ ನ್ಯಾಯಾಲಯಕ್ಕೆ ಒದಗಿಸತಕ್ಕದ್ದು.ಅಂತೆಯೇ ಆಕೆ ವಿಚಾರಣೆಯು ಮುಕ್ತಾಯವಾಗುವವರೆಗೂ ಅದೇ ಮೊಬೈಲ್ಸಂಖ್ಯೆಯನ್ನು ಉಳಿಸಿಕೊಳ್ಳತಕ್ಕದ್ದು.

ಹಾಜರಾತಿಯನ್ನು ಹಾಕಲು ಅವಳು ಪೊಲೀಸ್ ಠಾಣೆಗೆ ಹೋದಾಗ, ತಾನು ಮೊಬೈಲ್ ದೂರವಾಣಿ ಸಂಖ್ಯೆಗಳನ್ನು ಬದಲಾಯಿಸಿಲ್ಲ ಎಂದು ಪೊಲೀಸರಿಗೆ ಖಚಿತಪಡಿಸಬೇಕು.

(v) ಭವಿಷ್ಯದಲ್ಲಿ ಆಕೆ ಇನ್ನ್ಯಾವುದೇ ಕ್ರಿಮಿನಲ್ ಪ್ರಕರಣದಲ್ಲಿ ಭಾಗಿಯಾದರೆ ಮತ್ತು ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದರೆ, ನೀಡಲಾದ ಜಾಮೀನು ತಂತಾನೇ ರದ್ದುಗೊಳ್ಳುತ್ತದೆ ಮತ್ತು ಪೊಲೀಸರು ಅವಳನ್ನು ಬಂಧಿಸಬಹುದು.